೨೦

ದಿನಕಳೆದಂತೆ ಅತ್ತಿಮಬ್ಬೆ ಭಕ್ತಿಯ ಪುತ್ತಳಿಯಾದಳು. ಕಣ್ಣಲ್ಲಿ ಸದಾ ದೇವರ ಪರಂಜ್ಯೋತಿ ರೂಪ ಲಾಸ್ಯವಾಡಿತು. ಈಕೆಯ ಕಿವಿಯಲ್ಲಿ ದೇವರನಾಮವನ್ನು ಸೊಸೆಯರಿಬ್ಬರೂ ಎರೆಯುತ್ತಿದ್ದರು .ಈಕೆಯ ನಾಲಿಗೆ ಪಂಚನಮಸ್ಕಾರದಿಂದ ಸದಾ ಒದ್ದೆಯಾಗಿರುತ್ತಿತ್ತು. ಅತ್ತಿಮಬ್ಬೆ ಕರುಣೆಯಿಂದೀಕ್ಷಿಸಿದರೆ ಒಣಮರವೂ ಚಿಗುರುವಂತಾಯಿತು !ತನ್ನಲ್ಲಿರುವ ಅಪೂರ್ವ ಸಿದ್ಧಿಯನ್ನು ಪ್ರದರ್ಶಿಸಬಾರದೆಂದು ಈಕೆ ಎಷ್ಟೇ ಸಂಯಮದಿಂದ ಬಾಳಿದರೂ ಸಂದರ್ಭಗಳು ತಾವಾಗೇ ಮುಂದೆಬಂದು ಅತ್ತಿಮಬ್ಬೆಯ ಪ್ರಚಂಡ ಪವಾಡವನ್ನು ಬೀದಿಗೆಳೆಯುತ್ತಿದ್ದವು. ಒಮ್ಮೆ ಲಕ್ಕುಂಡಿಯಲ್ಲಿ ಇರಿವಬೆಡಂಗ ಓಲಗಗೊಟ್ಟಿದ್ದನು. ಪಟ್ಟದಾನೆಗೆ ಹುಚ್ಚು ರೇಗಿ ಕೈಗೆ ಸಿಕ್ಕಿದ್ದನ್ನೆಲ್ಲ ಧ್ವಂಸ ಮಾಡಿತು ! ಕೊನೆಗೆ ಓಲಗ ಶಾಲೆಗೂ ಧಾಳಿಯಿಟ್ಟಿತು. ನೇರವಾಗಿ ಇರಿವಬೆಡಂಗ ಮೇಲೆ ಬಿದ್ದು ಸೊಂಡಲಿನಲ್ಲಿ ಅವನನ್ನು ಎತ್ತಿ ಗರಗರ ತಿರುಗಿಸಿತು ! ಇರಿವಬೆಡಂಗನ ಗಾಬರಿಗೊಂಡು, "ಅಮ್ಮಾಜಿ ,ನನ್ನನ್ನು ಉಳಿಸು ಅಮ್ಮಾಜಿ" ಎಂದು ಬೊಬ್ಬೆ ಹಾಕಿದನು. ಅರಮನೆಯಲ್ಲೇ ಇದ್ದ ಅತ್ತಿಮಬ್ಬೆಗೆ ಇದು ತಿಳಿದು ಅವಸರವಸರವಾಗಿ ಓಡಿಬಂದಳು. ಪಂಚನಮಸ್ಕಾರವನ್ನು ಜಪಿಸುತ್ತ ಆನೆಯ ಬಳಿ ಬಂದು ನಿಂತಳು. ಆಕೆಯನ್ನು ಕಂಡುಕೂಡಲೆ ಆನೆಗೆ ಸೊಕ್ಕಡಗಿದಂತಾಗಿ ತೆಪ್ಪನೆ ನಿಂತು ಕೊಂಡಿತು. "ಏಕಪ್ಪ, ಹೀಗಾಡುವೆ ? ಅತ್ತಿಮಬ್ಬೆಯ ಮನೆಯಮೇಲೂ ನಿನಗೆ ಕಣ್ಣುಬಿತ್ತೆ ? ಹುಚ್ಚುಮುಂಡೇದೆ !" ಎಂದು ಆನೆಯ ಬೆನ್ನನ್ನು ತಡವಿದಳು. ಸೊಂಡಲಿನಲ್ಲಿದ್ದ ಇರಿವಬೆಡಂಗನ ಮೈದಡವಿದಳು. ಸಂಜೀವಿನಿಯ ತಳಿರನ್ನು  ಆತನ ಮೈಗೆಲ್ಲ ಹೊದಿಸಿದಂತಯಿತು ! ಅವನು ಮೇಲೆದ್ದು ಅತ್ತಿಮಬ್ಬೆಯ ಕಾಲಿಗೆಬಿದ್ದು ಹಸುಗೂಸಾಗಿ ಅತ್ತನು. "ಅಮಾಜಿ, ನೀವು ಬರದೇ ಹೋಗಿದ್ದರೆ ನನಗತಿ ಪೂರೈಸಿ ಹೋಗಿತ್ತು !" ಎಂದು ನಡುಗುತ್ತ ತಿಳಿಸಿದನು. "ಮಗು, ನಾನಿರುವತನಕ ಯಮನೂ ನಿನ್ನ ಬಳಿ ಸುಳಿಯಲಾರ !" ಎಂದು ಅತ್ತಿ ಮಬ್ಬೆ ಚಕ್ರವರ್ತಿ ಪಿತ್ರನಿಗೆ ಭರವಸೆ ನೀಡಿದಳು.

ಇನ್ನೊಮ್ಮೆ ಅತ್ತಿಮಬ್ಬೆ ತನ್ನ ಸೊಸೆಯರನ್ನೊ. ಮೊಮ್ಮಕ್ಕಳನ್ನೂ ಕರೆದುಕೊಂಡು ವನವಿಹಾಕಕ್ಕೆ ಹೋಗಿದ್ದಳು. ಅಲ್ಲಿ ಹೊಂಗೆ ಮರದಡಿಯಲ್ಲಿ ಜಿಮೇಂದ್ರನನ್ನು ಸ್ಥಾಪಿಸಿ ನದಿಯ

ನೀರಿಂದ ಅಭಿಷೇಕ ಮಾಡಿ ಅತ್ತಿಮಬ್ಬೆ ಪೂಜಿಸಿದಳು. ಮೊಮ್ಮಕ್ಕಳೆಲ್ಲ ಸುತ್ತಲೂ ಇದ್ದ ಕೈಗೆಟಕಿದ ಹೂಗಳನೂ. ತಳಿರನ್ನೂ ಕಿತ್ತುತಂದು ಅಜ್ಜಿಯ ಪೂಜೆಗೆ ಸಹಾಯಮಾಡಿದರು. ಪೂಜೆಯಾಯಿತು. ಸೊಸೆಯರು ಮಾಡಿದ ಔತಣವನ್ನು ಎಲ್ಲರೊಡನೆ ಕುಳಿತು ಅತ್ತಿಮಬ್ಬೆ ತಾನೂ ಉಂಡು ವಿಶ್ರಮಿಸಿಕೊಂಡಳು. ಎಚ್ಚರವಾದ ಮೇಲೆ ಅತ್ತಿಮಬ್ಬೆ ತನ್ನ ಪೂಜಾಬಿಂಬ ಇಲ್ಲದುದನ್ನು ಕಂಡು ಗಾಬರಿಗೊಂಡಳು. ಎಲ್ಲರನ್ನೂ  ಕೇಳಿದಳು. ಎಲ್ಲರೂ ಕಾಣೆವು ಎಂದರು .ಚಿಕ್ಕವನ್ನು ಮಾತ್ರ "ಮೂರ್ತಿಗೆ ಮೈತೊಳೆಯಲು ನದಿಗೆ ತೆಗೆದುಕೊಂಡು ಹೋದೆ ಅದು ಕೈಜಾರಿತು" ಎಂದು ಹೇಳಿದನು. ಎಸೆದ ಜಾಗ ನೋಡಿಸೆಂದಾಗ ಐದರುಕಡೆ ನೋಡಿಸಿದನು.

ಅತ್ತಿಮಬ್ಬೆ ತನ್ನ ಮೂರ್ತಿ ಸಿಗುವ ತನಕ ಅನ್ನನೀರು ಮುಟ್ಟುವುದಿಲ್ಲವೆಂದು ಶಪಥಮಾಡಿದಳು. ಕಾಳದೇವಿ ಈಕೆಗೆ ಮದುವೆಯಲ್ಲಿ ಬಾಗಿನವಾಗಿ ಈ ಅಪೂರ್ವ ಬಿಂಬವನ್ನು ಕೊಟ್ಟಿದ್ದಳು. ಈ ಮೂರ್ತಿಗೂ ಈಕೆಗೂ ಏನೋ ಅನ್ಯೋನ್ಯ ಬಂದು ಹೋಗಿತ್ತು. ಈಕೆ ಕೈಯಾರೆ ಪೂಜೆ ಮಾಡದಂದು ಮೂರ್ತಿಯೂ ಮಂಕಾಗುತ್ತಿತ್ತು. ಈಕೆಯೂ ಮಂಕಾಗುತ್ತಿದ್ದಳು. ! ಅತ್ತಿಮಬ್ಬೆ ಹಣ್ಣು ಹಣ್ಣು ಮುದುಕಿಯಾಗಿರುವಳು. ನೋಂಪಿಗಳಿಂದ ದೇಹ ಮೊದಲೇ ನವೆದಿದೆ. ಈಗ ಒಂದು ವಾರದಿಂದ ಮೂರ್ತಿಯ ನೆಪದಲ್ಲಿ ಉಪವಾಸಬೇರೆ ! ಕಣ್ಣಲ್ಲಿ ನೋಡದಂತಾದಳು. ಅಣ್ಣಿಗದೇವ ಅಂಥ ಮೂರ್ತಿಗಳನ್ನೇ ಒಂದಲ್ಲ ಹತ್ತು ತಂದನು .ತಾಯಿ ಹಟಬಿಡಲಿಲ್ಲ.ಅದೇ ಮೂರ್ತಿಬೇಕೆಂದು ಚಂಡಿ ಹಿಡಿದಳು. ಎಂಟನೇ ದಿನ ಪಟ್ಟದಾನೆಗೆ ಮತ್ತೆ ಹುಚ್ಚು ರೇಗಿತು. ಕಬ್ಬಿಣದ ಸರಪಳಿಯನ್ನು ತುಂಡುತುಂಡು ಮಾಡಿತು ! ಮನಸ್ಸಿಗೆ ಬಂದಕಡೆ ನುಗಿತು. ಬೆಳಿಗ್ಗೆ ಅದಕ್ಕೆ ಹುಚ್ಚು ರೇಗಿದ್ದು ಸಂಜೆ ಹೊತ್ತಿನಲ್ಲಿ ನದಿಗಿಳಿದು, ಅರೆಘಳಿಗೆ ಮುಳುಗಿ ಎದ್ದು ಕೊನೆಗೆ ಅತ್ತಿಮಬ್ಬೆಯ ಪಚ್ಚೆಬಿಂಬವನ್ನು ಹುಡುಕಿ ಅದನ್ನು ಸೊಂಡಿಲಲ್ಲಿ ಹಿಡಿದುಕೊಂಡು ಬಂದಿತು. ದಾರಿಗುಂಟ ಜನ ಕಿಕ್ಕಿರಿದು ಭಕ್ತಿಯಿಂದ ಕೈಮುಗಿದು 'ವಿಜಯಪಾರ್ಶ್ವನಾಥನಿಗೆ ಜೈ !" ಎಂದು ಜಯಕಾರ ಮಾಡಿದರು. ಮದಗಜ ನೇರವಾಗಿ ದೇವಸ್ಥಾನದ ಕೈಲಾಸಲೆಯಲ್ಲಿದ್ದ ಅತ್ತಿಮಬ್ಬೆಯ ಬಳಿ ನಿಂತಿತು. ಆಕೆ ಆನೆಯನ್ನೂ ಅದರ ಸೊಂಡಲಲ್ಲಿದ್ದ ಮೂರ್ತಿಯನ್ನೂ ಕಂಡು ಕಾಲಿಗೆ ಬಿದ್ದಿತು ! ಬಾಳೆಯ ಗೊನೆಗಳನ್ನೂ, ಕಬ್ಬಿನ ಜಲ್ಲೆಯ ಹೊರೆಗಳನ್ನೂ ಆನೆಗೆ ಪ್ರೀತಿಯಿಂದ ಅತ್ತಿಮಬ್ಬೆ ಕೈಯಾರೆ ತಿನ್ನಿಸಿದಳು.

ಹೋದ ಮೂರ್ತಿ ಮತ್ತೆ ಬಂದುದು ಜಾತ್ರೆಯಲ್ಲಿ ಮಗುವನ್ನು ಕಳೆದುಕೊಂಡು ಗೋಳಾಡುತ್ತಿದ್ದ ತಾಯಿಗೆ ಮತ್ತೆ ಮಗು ಸಿಕ್ಕಿದಷ್ಟು ಆನಂದವಾಯಿತು. ! ಎಂಟು ದಿನ ಎಡೆಬಿಡದೆ ಅದಕ್ಕೆ ಎಲ್ಲ ಅಭಿಷೇಕಗಳನ್ನೂ ಮಾಡಿದಳು ! ಸಹಸ್ರದೀಪಗಳನ್ನು ಹಚ್ಚಿ ಗಂಧದ ಧೂಪಹಾಕಿ ಸುಂಗಧದ ತೂಗುಯ್ಯಾಲೆಯಲ್ಲಿ ಮೂರ್ತಿಯನ್ನು ತೂಗಿದಳು. ಜಿನಸ್ತುತಿಯ ಜೋಜೋ ಹಾಡಿದಳು. ಈಕೆಯ ಮೊಮ್ಮಕ್ಕಳೆಲ್ಲ ಬಂದು ಜೊತೆಯಾದರು. ನೈವೇದ್ಯವನ್ನು ಅವರಿಗೆಲ್ಲ ಹಂಚಿದಳು. ಅವರಿಂದಲೂ ಹಾಡಿಸಿದಳು. ಅವರನ್ನು ದೇವರ ಹೆಸರಿನಲ್ಲಿ ಕುಣಿಸಿದಳು !

ಹೀಗಿರುವಾಗ ಶ್ರವಣಬೆಳಗೊಳದಿಂದ ಗೋಮಟೇಶ್ವರ ವಿಶ್ವವಿದ್ಯಾನಿಲಯದ ಸಂಚಾಲಕರು ಮತ್ತೊಮ್ಮೆ ಆಗಮಿಸಿದರು. ಅತ್ತಿಮಬ್ಬೆಗೆ ದಿನಕಳೆದಂತೆ ದೇವರಲ್ಲಿ ಸಂಪೂರ್ಣಭಕ್ತಿ ಹಾಗು ಭರವಸೆಗಳು ಮೂಡಿದವು. ಕೈಲಿದ್ದ ಕಾಸು ಮುಗಿದ ಮೇಲಂತೂ ಎಲ್ಲ ಮಾಡಿದವನೂ ಜಿನೇಂದ್ರನೇ ಎಂಬ ನಂಬುಗೆ ಬಲವಾಯಿತು.

"ಸಂಚಾಲಕರೆ, ತಾವು ಬಂದುದು ಸಂತೋಷ. ನನ್ನ ಮನೆಗೆ ಪುಣ್ಯವನ್ನು ತಂದು ತುಂಬುತ್ತಿರುವಿರಿ ! ನನ್ನಿಂದ ಏನಾಗಬೇಕಾಗಿತ್ತು ?" ಎಂದು ಸಂತೃಪ್ತಳಾಗಿ ಕೇಳಿದಳು.

"ಅಮ್ಮಾಜಿ ,ತಾವು ಕೊಟ್ಟ ಹಣದಿಂದ ಶ್ರವಣಬೆಳಗೊಳದಲ್ಲಿ ವಿಶ್ವವಿದ್ಯಾನಿಲಯ ಸ್ಥಾಪಿಸಿದೆವು. ಯಾತ್ರಿಕರೂ ಅಲ್ಪಸ್ವಲ್ಪ ಹಣ ಕೊಡುತ್ತಿರುವರು. ಅಷ್ಟರಿಂದಲ್ಲೇ ವಿಶ್ವವಿದ್ಯಾನಿಲಯ ನಡೆಯದು. ಇಂದಿಗೇನೋ ತಾಪತ್ರಯವಿಲ್ಲ .ಇನ್ನೂ ಒಂದು ವರ್ಷ ಸುಸೂತ್ರವಾಗಿ ನಡೆಸಿಕೊಂಡು ಹೋಗುಬಹುದು .ಮೂಲಧನ ಮಾಡೋಣವೆಂದು ಪಟ್ಟಾಚಾರ್ಯರು ಹೇಳುತ್ತಿರುವರು. ಯಾವುದಕ್ಕೂ ತಮ್ಮ ಅನುಮತಿ ಬೇಕು. ಮೂಲಧನವನ್ನು ತಮ್ಮ ಹೆಸರಿನಲ್ಲೇ ಪ್ರಾರಂಭಿಸಬೇಕೆಂದೂ ಕಾರ್ಯಕರ್ತರೆಲ್ಲ ಪಟ್ಟು ಹಿಡಿದಿರುವರು. ಅದರಿಂದಾಗಿ ನಾನು ಇತ್ತ ಬರಬೇಕಾಯಿತು" ಎಂದು ಸಂಚಾಲಕರು ತಿಳಿಸಿದರು.

"ಮೂಲಧನ ಅನ್ನುತ್ತಿರುವಿರಿ. ಎಷ್ಟು ಬೇಕಾಗಬಹೋದೋ ?"

"ಒಂದು ಕೋಟಿಯಾದರೂ ಬೇಕಾಗಬಹುದು" ಎಂದು ಸಂಚಾಲಕ ತಿಳಿಸುತ್ತಿದ್ದಂತೆ ಅತ್ತಿಮಬ್ಬೆಗೆ ಎದೆ ತಸ್ ಎಂದಿತು. ಅದನ್ನು ನೋಡಿಸಿಕೊಳ್ಳದೆ "ಒಂದು ವಾರ ಇಲ್ಲೇ ಇದ್ದುಬಿಡಿ. ವ್ಯವಸ್ಥೆ ಮಾಡಿ ಕಳಿಸಿಕೊಡುವೆನು" ಎಂದು ಕೈಯಲ್ಲಿ ಹಣವಿದ್ದವಳಂತೆ ಭರವಸೆಕೊಟ್ಟಳು.

ಅತ್ತಿಮಬ್ಬೆ ಇಂದಿಗೂ ಬಡವಳಲ್ಲಿ. ಆದರೆ ಆಕೆಯದಾಗಿ ಒಂದು ಕವಡೆಯೂ ಇಲ್ಲ. ಒಂದು ಮಾತು ಹೇಳಿದರೆ ಅಣ್ಣಿಗ ತಾಯಿಗಾಗಿ ತನ್ನ ರಾಜ್ಯವನ್ನೇ ಬರೆದು ಕೊಡಲೂ ಸಿದ್ಧ. ಅತ್ತ ಇರಿಬೆಡಂಗನಿಗೆ ತಿಳಿಸಿದರೆ ಒಂದೇಕೆ ಹತ್ತುಕೋಟಿಯನ್ನು ನಿಂತ ಹೆಜ್ಜೆಯಲ್ಲೇ ಚೆಲ್ಲುವನು. ಆದರೆ ಅತ್ತಿಮಬ್ಬೆ ಎಂದೂ ಕೈಯೊಡ್ಡಿದವಳಲ್ಲ. ಮಗನನ್ನೂ ಬರಿಗೈಮಾಡಲು ಈಕೆಗಿಷ್ಟವೂ ಇಲ್ಲ. ಅಷ್ಟೋ ಇಷ್ಟೋ ಆಗಿದ್ದರೆ ಸೊಸೆಯರಿಗೆ ಹೇಳಬಹುದಾಗಿತ್ತು. ಯಾವುದೋ ಪ್ರೇರಣೆಯಾದಂತಾಗಿ ಸಂಚಾಲಕರಿಗೆ ಮಾತು ಕೊಟ್ಟುಬಿಟ್ಟಳು.

ಪಚ್ಚೆ ಪಾರ್ಶ್ವನಾಥನ ಮುಂದೆ ಕುಳಿತು ತಪವೆಸಗಿದಳು. ಭಾವನೆಯಲ್ಲೇ ಸುವರ್ಣಾಭಿಷೇಕ ಮಾಡಿದಳು. ಐದಾರು ದಿನಕಳೆಯಿತು. ದೇವರ ಮುಂದೆ ಕುಳಿತು. ಅತ್ತಳು !

"ಸ್ವಾಮಿ, ಕೊನೆಗಾಲದಲ್ಲಿ ನನ್ನ ನಾಲಗೆ ಹೋಗಬೇಕೆ ? ಕೇಳಿದವರಿಗೆ ಇಲ್ಲವೆಂದು ಹೇಳುವ ಅಭ್ಯಾಸವೇ ನನಗಿಲ್ಲವಲ್ಲ. ಇದುವರಿಗೂ ನಡೆಸಿ ಕೊಟ್ಟಿರುವೆ. ನಾನಿರುವ ತನಕ ನಡೆಸಿಕೊಟ್ಟಬಿಡು. ನನಗಾಗಿ ಏನನ್ನೂ ಕೇಳುವುದಿಲ್ಲ .ಎಂದಾದರೂ ಕೇಳಿದ್ದರೆ ಹೇಳು. ?ಜನತೆಗಾಗಿ. ನಾಡಿಗಾಗಿ ಕೇಳುತ್ತಿರುವೆನು. ದೀನದಲಿತರನ್ನೆಲ್ಲ ನೀನೇ ಕರೆದುಕೊಂಡು ಬಂದು ನನ್ನ ಮನೆ ತೋರಿಸಿ ಚಕ್ಕಂದವಾಡುತ್ತಿರುವೆ !ನನ್ನಲ್ಲಿ ಏನಿದೆ ಏನಿಲ್ಲ ಎಂದು ನಿನಗೆ ತಿಳಿಯದೆ ಸ್ವಾಮಿ ? ಬೆಳಕು ನೀಡದ ಸೂರ್ಯ, ಬೆಳದಿಂಗಳನ್ನು ಕರೆಯದ ಚಂದ್ರ, ದಾನ ಕೊಡಲಾರದ ದಾನಚಿಂತಾಮಣಿ ಇದ್ದರೂ ಒಂದೇ ಹೋದರೂ ಒಂದೇ ! ನಿರ್ಗಂಧ ಕುಸುಮವಾಗಿ ನಾನು ಬಾಳಲಾರೆ ಪ್ರಭು !ಇಲ್ಲ ನನ್ನ ಮನೆಯಲ್ಲಿ ಸುವರ್ಣವೃಷ್ಟಿ ಮಾಡು. ಬಂದವರು ಬರಿಗೈಯಲ್ಲಿ ಹೋಗದಂತಾಗಲಿ ! ಇಲ್ಲವೇ ನನಗೆ ಆಯುಸ್ಸು ಸಾಕು. ಸಮಾಧಿಮರಣ ಕೊಟ್ಟುಬಿಡು ! ಆದರೆ ಶ್ರವಣಬೆಳಗೊಳದ ವಿಶ್ವವಿದ್ಯಾನಿಲಯಕ್ಕೆ ಮಾತುಕೊಟ್ಟಿರುವುದನ್ನು ನಡೆಸಿಕೊಡು. ಮುಂದೆ ನಿನ್ನಿಷ್ಟದಂತಾಗಲಿ" ಎಂದು ಮೊರೆಯಿಟ್ಟಳು. ಕಂಬನಿ ಮಿಡಿದು ಕೇಳಿದಳು. ಈ ವೇಳೆಗೆ ಸರಿಯಾಗಿ ನಾಲ್ವರು ಮೊಮ್ಮಕ್ಕಳೂ

ಈಕೆಯ ಪೂಜಾಗೃಹಕ್ಕೆ ಧಾವಿಸಿದರು. ಅಜ್ಜಿ ಅಳುವುದನ್ನು ಕಣ್ಣಾರೆ ಕಂಡರು. “ಅಜ್ಜಿ ಏಕಳುತ್ತಿರುವೆ ?” ಎಂದು ಗುಂಡುಮಬ್ಬೆ ಬೆಸಗೊಂಡಳು.

“ಅಜ್ಜಿ, ನಿನಗೆ ಏನಾಗಿದ ಅಜ್ಜಿ ? ಯಾರಾದರೂ ಬೈದರೆ ಅಜ್ಜಿ ?” ಎಂದು ಅಬ್ಬಕಬ್ಬೆ ಕೇಳಿದಳು.

“ಅಜ್ಜಿ, ಮೈಚೆನ್ನಾಗಿಲ್ಲವೆ ಅಜ್ಜಿ ?” ಎಂದು ಕೈಹಿಡಿದು ಮೂರನೆಯವಳು ಪದ್ಮಬ್ಬೆ ಬೆಸಗೊಂಡಳು.

“ಅಜ್ಜಿ, ನಿನಗೆ ಏನು ಬೇಕಜ್ಜಿ, ಖಂಡಿತ ತಂದುಕೊಡುವೆನು. ಅಳಬೇಡಜ್ಜಿ. ನೀನು ಅತ್ತರ ನನಗೂ ಅಳುಬರುವುದು” ನಾಲ್ಕನೆಯ ಮೊಮ್ಮಗ ನಾಗದೇವ ಅಳುಮೋರೆ ಮಾಡಿಕೊಂಡು ತನ್ನ ಅಂಗೈಯಿಂದ ಅತ್ತಿಮಬ್ಬೆಯ ಕಂಬನಿಯನ್ನು ಒರೆಸುತ್ತ ಕೇಳಿದಳು.

“ಏನು ಹೇಳಲಿ ಮಕ್ಕಳಿರ, ನೀವಾರು ನನ್ನ ಸಂಕಟ ತೀರಿಸಲಾರಿರಿ.”

“ಅಜ್ಜಿ ,ನಾನಿರುವೆನು ಹೆದರಬೇಡ” ಎಂದು ಪ್ರತಿಯೊಬ್ಬರೂ ಭರವಸೆಕೊಟ್ಟರು.

“ನನಗೆ ಹಣ ಬೇಕಾಗಿದೆ. ಮಕ್ಕಳಿರೆ. ಕೈಯಲ್ಲಿ ಒಂದು ಕಾಸೂ ಇಲ್ಲದಂತಗಿದೆ” ಎಂದು ಅತ್ತಿಮಬ್ಬೆ ತನ್ನ ಮೊಮ್ಮಕ್ಕಳ ಮುಂದೆ ಬಡತನವನ್ನು ತೋಡಿಕೊಂಡಳು.

“ಅಜ್ಜಿ ಹಣವೇ ? ಹಣಕ್ಕೋಸ್ಕರ ನೀನು ಅಳುವುದೇ ? ಛೇ ! ನನಗೆ ತಿಳಿಸಬಾರದಾಗಿತ್ತೆ ? ಈಗಲೇ ತಂದುಕೊಡುವೆನು” ಎಂದು ಬಬ್ಬೊಬ್ಬರೂ ಧೈರ್ಯ ಹೇಳಿ ದೇವರ ಕೋಣೆಯ ಹೊರಗೆ ಓಡಿದರು. ಒಂದೆರಡು ಚಣ ಕಳೆದುಕೊಂಡು ನಾಲ್ವರೂ ನಾ ಮುಂದು ತಾ ಮುಂದು ಎಂದು ಓಡಿಬಂದರು.

“ಅಜ್ಜಿ, ನನ್ನ ಬಳಿ ಇರುವ ಹಣವನ್ನೆಲ್ಲ ತೆಗೆದುಕೋ” ಎಂದು ಗುಂಡುಮಬ್ಬೆ ಒಂದು ಬೊಗಸೆ ಚಿನ್ನದ ನಾಣ್ಯಗಳನ್ನು ಅತ್ತಿಮಬ್ಬೆಯ ಮುಂದೆ ಸುರಿದಳು.

“ಅಜ್ಜಿ ,ಸುಮ್ಮನೆ ಈ ಹಣ ಕೊಳೆಯುತ್ತಿದೆ. ನಮಗೇತಕ್ಕೆ ಬೇಕು ? ನೀನೇ ತೆಗೆದು ಕೊಂಡುಬಿಡು” ಎಂದು ಅಬ್ಬಕಬ್ಬೆ ತನ್ನಲ್ಲಿದ್ದ ನಾಣ್ಯಗಳನ್ನಲ್ಲ ತಂದು ಸುರಿದಳು.

“ಅಜ್ಜಿ , ಈ ಹಣವೆಲ್ಲ ನಿನಗಿರಲಿ. ಏನಾದರೂ ಮಾಡಿಕೋ ಮತ್ತೆ ನಾನು ಕೇಳುವುದಿಲ್ಲ” ಎಂದು ಪದ್ಮಬ್ಬೆ ಇದ್ದಬದ್ದ ನಾಣ್ಯಗಳನ್ನು ತಂದು ಅಜ್ಜಿಯ ಮಡಿಲಲ್ಲಿ ಹಾಕಿದಳು.

“ಅಜ್ಜಿ, ನಾನು ಕೂಡಿಟ್ಟಿರುವ ಹಣವೆಲ್ಲ ಇಷ್ಟೇನಜ್ಜಿ .ಅರ್ಧ ನಿನಗಿರಲಿ. ಇನ್ನರ್ಧ ನನಗಿರಲಿ. ಎರಡು ಗುಡ್ಡೆ ಮಾಡುವೆನು. ಯಾವುದು ಬೇಕೋ ತೆದುಕೋ” ಎಂದು ನಾಗದೇವ ತಾನು ತಂದ ನಾಣ್ಯಗಳನ್ನು ಎರಡು ಗುಡ್ಡೆ ಮಾಡಿದನು. ಒಂದು ಗುಡ್ಡೆಯನ್ನು ತೆದುಕೊಳ್ಳುವಂತೆ ಅತ್ತಿಮಬ್ಬೆಯನ್ನು ಬಲವಂತಮಾಡಿದನು.

“ಅಪ್ಪಾಜಿ, ನಿನ್ನ ಅಕ್ಕಂದಿರೆಲ್ಲ ಇರುವ ಹಣ ಪೂರ್ತಿ ಕೊಟ್ಟುಬಿಟ್ಟರು. ನೀನು ಮಾತ್ರ ಅರ್ಧಕೊಡುವುದು ಸರಿಯೆ ?” ಎಂದು ನಾಗದೇವನನ್ನು ಎತ್ತಿ ಮುದ್ದಾಡುತ್ತ ಕೇಳಿದಳು.

“ಅಜ್ಜಿ ,ಅರ್ಧ ಬಚ್ಚಿವಿಡುವೆನು. ಇನ್ನೆಂದಾದರೂ ನೀನು ಅತ್ತಾಗ ತಂದುಕೊಡುವೆನು. ಹೆದರಬೇಡ” ಎಂದು ಸಹಜವಾಗಿ ಆ ಮಗು ತಿಳಿಸಿತು. ಅತ್ತಿಮಬ್ಬೆಗೆ ಆನಂದಾಶ್ರು ಹನಿಯಿತು. ನಾಗದೇವನನ್ನು ಎತ್ತಿ ಮುದ್ದಾಡಿದಳು.

“ಅಜ್ಜಿ, ಅವನು ಜಿಪುಣ. ಕೈತೂರೆದು ಕೊಡಲಾರ” ಎಂದು ಅವನ ಅಕ್ಕಂದಿರೆಲ್ಲ ಕೂಗಾಡಿದರು.

“ಹುಚ್ಚಮ್ಮಗಳಿರ, ನೀವೆಲ್ಲ ನನ್ನಂತೆ ಮುಂದಾಲೋಚನೆಯಿಲ್ಲದ ಮಂಕುಗಳು ! ನನ್ನ ಪಾಪಚ್ಚಿ ನಾಗದೇವ ಮಾತ್ರ ಜಾಣಮರಿ ! ದಾನವನ್ನೂ ಕೊಡುವನು, ಇನ್ನೊಂದು ಕಡೆ ಆಪತ್ಕಾಲಕ್ಕಿರಲೆಂದು ಕೂಡಿಡುವನು. ಎರಡೂ ಇರಬೇಕಮ್ಮ. ಇಲ್ಲದಿದ್ದರೆ ನೀವೂ ನನ್ನಂತ ಅಳಬೇಕಾಗುವುದು” ಎಂದು ಮೊಮ್ಮಕ್ಕಳಿಗೆ ಬದ್ಧಿ ಹೇಳಿದಳು. ಆ ಮಕ್ಕಳು ಕೊಟ್ಟ ಹಣವೆಲ್ಲ ಮೂರು ಬೊಗಸೆಯಾಯಿತು. ಎಲ್ಲವನ್ನು ತೆಗೆದುಕೊಂಡು ಅವಕ್ಕೆ ಭಕ್ತಿಯ ಒಪ್ಪಹಾಕಿ ಪಚ್ಚೆಪಾರ್ಶ್ವನಾಥನಿಗೆ ದ್ರವ್ಯಾಭಿಷೇಕ ಮಾಡಿದಳು ! ಕುಬೇರನ ಕೋಶಾಗರ ಬಿರಿದಂತಾಯಿತು ! ಚಣಕಾಲ ಕಣ್ ಮುಚ್ಚಿ ಅಂತುರ್ಮುಖಿಯಾದಳು. ಮಕ್ಕಳೆಲ್ಲ ಹೊರಟುಹೋದರು.

“ಅಮ್ಮಾಜಿ ,ಅಮ್ಮಾಜಿ” ಎಂದು ಕರೆದಾಗಲೆ ಅತ್ತಿಮಬ್ಬೆಗೆ ಎಚ್ಚರ. ಕಣ್‌ಬಿಟ್ಟು ನೋಡಿದರೆ ತನ್ನ ಮುಂದೆ ಇರಿವಬೆಡಂಗನೂ ಅಣ್ಣಿಗನೂ ನಿಂತಿರುವನು !

"ಓಹೋ ಇರಿವಬೆಡಂಗ ! ಯಾವಾಗ ಬಂದೆ ಮಗು ? ತೈಲಪರು ಚೆನ್ನಾಗಿರುವರೆ ! ಮಹಾರಾಣಿ ಚಕ್ರೇಶ್ವರಿಗೆ ಕುಶಲವೆ ?" ಎಂದು ಪ್ರಶ್ನಿಸಿದಳು. ಬಂದವರಿಬ್ಬರೂ ದೇವರ ಕೋಣೆಗೇ ಬಂದು ನಮ್ರರಾಗಿ ಕುಳಿತುಕೊಂಡರು.

"ಅಮ್ಮಾಜಿ ,ತಮ್ಮನ್ನು ನೋಡಬೇಕೆನಿಸಿತು. ಅದರಿಂದ ಬಂದೆ " ಎಂದು ಇರಿವ ಬೆಡಂಗ ತಿಳಿಸಿದನು.

"ಮದುಕಿಯನ್ನು ಚಕ್ರವರ್ತಿ ಮರೆಯಲಿಲ್ಲ !" ಎಂದು ಅತ್ತಿಮಬ್ಬೆ ನಗೆಯಾಡಿದಳು.

"ತಮ್ಮನ್ನು ನನ್ನ ಮರೆತರ ನನ್ನ ಚಕ್ರವರ್ತಿತನ ಅರೆಘಳಿಗೆಯೂ ಉಳಿಯಲಾರದು ತಾಯಿ !"

"ನನ್ನನ್ನು ನೋಡುವುದಕ್ಕೇ ಬಂದೆಯೋ ಅಥವ ಏನಾದರೂ ರಾಜಕಾರ್ಯ ವಿತ್ತೋ ?"

"ತಮ್ಮನ್ನು ನೋಡುವುದಕ್ಕಾಗೇ ಬಂದೆ. ಅಪ್ಪಾಜಿ ಕಳಿಸಿಕೊಟ್ಟರು."

"ಏನಾದರೂ ವಿಶೇಷವಿದೆಯೇ ?"

"ನಾಗದೇವರು ಸತ್ತಾಗ ತಮಗೆ ಪರಿಹಾರವಾಗಿ ಏನೂ ಕೊಟ್ಟಿಲ್ಲವಂತೆ. ಇದ್ದಕ್ಕಿದ್ದಂತೆ ಒಂದು ವಾರದಿಂದ ತಂದೆಯ ಮನಸ್ಸಿನಲ್ಲಿ ಈ ಯೋಚನೆ ಕಾಣಿಸಿ ಕೊಂಡಿತಂತೆ. ನಿಂತರೂ ಸಮಾಧಾನವಿಲ್ಲ, ಕುಳಿತರೂ ಸಮಾಧಾನವಿಲ್ಲದಂತಾಯಿತಂತೆ ! ನಿಮಗೆ ಪರಿಹಾರವಾಗಿ ಎರಡು ಕೋಟಿ ಹೊನ್ನನ್ನು ಲೆಕ್ಕ ಹಾಕಿರುವರು. ಎಲ್ಲವನ್ನೂ ಆನೆಗಳ ಮೇಲೆ ಹೇರಿಕೊಂಡು ಬಂದಿರುವೆನು. ತಮ್ಮ ಮನೆಯ ಪಡಸಾಲೆಯಲ್ಲಿ ಚಿನ್ನದ ನಾಣ್ಯಗಳ ರಾಶಿ ಹಾಕಿರುವೆನು. ಸ್ವೀಕರಿಸಿ ನಮ್ಮ ವಂಶವನ್ನು ಹರಸಬೇಕು" ಎಂದು ಇರಿವಬೆಡಂಗ ನಮ್ರನಾಗಿ ಕೇಳಿಕೊಂಡನು.

ಅತ್ತಿಮಬ್ಬೆ ತನ್ನ ಪೂಜಾವಿಗ್ರಹವನ್ನು ಮೇಲೆತ್ತಿ ಎಲ್ಲರನ್ನೂ ಹರಸುವ ಜಿನೇಂದ್ರ ಈ ನಮ್ಮ ಪಾರ್ಶ್ವನಾಥ ! ನನ್ನ ಮಕ್ಕಳುಮರಿ ಬೇರೆಯೆ ನಿಮ್ಮ ಪೀಳಿಗೆ ಬೇರೆಯೆ ? ನಾನಿರುವ ತನಕ ನೀವಾರೂ ಹೆದರದಿರಿ" ಎಂದು ಅತ್ತಿಮಬ್ಬೆ ಇರಿವಬೆಡಂಗನಿಗೆ ಪೂಜೆಯ ಹೂವನ್ನು ಕೊಟ್ಟಳು. ತೀರ್ಥವನ್ನು ಅವನ ತಲೆಯ ಮೇಲೆ ಹಾಕಿದಳು ! ಮಕ್ಕಳಿಗೆ ಕೊಡುವಂತೆ ಅಣ್ಣಿಗನಿಗೂ ಇರಿವಬೆಡಂಗನಿಗೂ ಚರುಪನ್ನು ಹಂಚಿದಳು ! ಈ ವೇಳೆಗೆ ಸರಿಯಾಗಿ ರನ್ನ ಕವಿ ಅವಸರವಸರವಾಗಿ ಬಂದು ಅತ್ತಿಮಬ್ಬೆ ದರ್ಶನ ಮಾಡಿ, "ಅಮ್ಮಾಜಿ ,ತಾವು ಒಂದು ವಾರದಿಂದ ಏನೋ

ಸಂಕಟಪಡುತ್ತಿರುವಿಲ್ಲ. ನನಗಾದರೂ ಒಂದು ಮಾತು ಹೇಳಬಾರದಾಗಿತ್ತೆ" ಎಂದು ಗಾಬರಿಗೊಂಡು ಕೇಳಿದನು.

"ಮಗು ,ನನ್ನ ಸಂಕಟ ನಿನಗೆ ಹೇಗೆ ಗೊತ್ತಾಯಿತು ?"

"ಅಮ್ಮಾಜಿ, ನಾನು ಭತ್ತಗ್ರಾಮದಲ್ಲಿದ್ದರೂ ನನ್ನ ಕರುಳು ತಮ್ಮ ಪಾದಾರವಿಂದದಲ್ಲೇ ನೆಲಸಿರುವುದು. ಕಣ್ಣರಿಯದೊಡಂ ಕರುಳರಿಯದೇ ?ನನ್ನೊಡನೆ ಬನ್ನಿ, ತಮ್ಮ ಸಂಕಟವನ್ನು ಸಾಕ್ಷಿಕೊಟ್ಟ ನೋಡಿಸುವೆನು" ಎಂದು ಆಕೆಟನ್ನೂ ಅಣ್ಣಿಗನನ್ನೂ ಮತ್ತು ಇರಿವಬೆಡಂಗನನ್ನೂ ರನ್ನ ಅರಮನೆಯ ಅಂಗಳಕ್ಕೆ ಕರೆದುಕೊಂಡು ಹೋದನು. ಅತ್ತಿಮಬ್ಬೆ ಅನಾವರಣಮಾಡಿ ಬೆರಗಾದಳು ! ಅಲ್ಲಿ ಅತ್ತಿಮಬ್ಬೆಯ ಪದ್ಮಾಸನದ ಬಂಗಾರದ ಮೂರ್ತಿ ವಿರಾಜಮಾನವಾಗಿತು ! ಅದರ ಕಣ್ಣಿಂದ ಕಂಬನಿ ಸುರಿದ ಗುರುತೂ ಮಾಸದಂತೆ ಇದ್ದುದನ್ನು ಕಂಡು ಎಲ್ಲರೂ ಅಚ್ಚರಿಗೊಂಡರು.

"ಮಗು ರನ್ನ ,ಈ ಮೂರ್ತಿಗೆ ಇಷ್ಟೊಂದು ಬಂಗಾರ ಎಲ್ಲಿಂದ ತಂದೆಯೋ ?"

"ಅಮ್ಮಾಜಿ. ತಾವು ನನ್ನ ತುಲಾಭಾರ ತೂಗಿಸಿ ಕೊಟ್ಟ ಬಂಗರದಲ್ಲೇ ಎಂದೋ ನಾನು ನಿಮ್ಮನ್ನು ಎರಕಹೊಯ್ಸಿ ದಿನವೂ ಪೂಜಿಸುತ್ತಿರುವೆನು."

"ಬದುಕಿದ್ದಾಗಲೇ ಮೂರ್ತಿ ಮಾಡಬಾರದಲ್ಲಪ್ಪ."

"ಅಮ್ಮಾಜಿ, ತಾವು ಅಮರರು ! ತಾವು ಸಯುವುದೇ ಇಲವಲ್ಲ !" ಎಂದು ರನ್ನ ಗಂಭೀರವಾಗಿ ಉತ್ತರಕೊಟ್ಟನು.

"ಅಯ್ಯೋ ಬೆಪ್ಪೆ, ನಾನು ಕೊಟ್ಟ ಬಂಗಾರದಲ್ಲಿ ನಿನ್ನ ಬಡತನ ನೀಗಿಸಿಕೊಂಡು ಹೆಂಡತಿ ಮಕ್ಕಳಿಗೆ ಆಭರಣ ಮಾಡಿಸಿ ಹಾಯಾಗಿರದೆ ಮಣಗಟ್ಟಲೆ ಬಂಗಾರದಲ್ಲಿ ನಶ್ವರವಾದ ನನ್ನನ್ನು,ಸಾಮಾನ್ಯ ಹೆಣ್ಣನ್ನು , ದಿಕ್ಕೆಟ್ಟ ವಿಧವೆಯನ್ನು ಎರಕಹೊಯ್ಸಿ ನಿನ್ನ ಮೂರ್ಖತನಕ್ಕೆ ಮೆರಗು ಹಾಕಿಸಿರುವೆ ! ಈ ಬಂಗಾರದಲ್ಲಿ ಸಹಸ್ರಾರು ಜಿನಮೂರ್ತಿಗಳು ಮಾಡಿಸಬಹುದಾಗಿತ್ತಲ್ಲ " ಎಂದು ಅತ್ತಿಮಬ್ಬೆ, ರನ್ನನ್ನು ಆಕ್ಷೇಪಿಸಿದಳು.

"ಅಮ್ಮಾಜಿ ,ನ್ನನ ಹೆಂಡತಿಯರಿಬ್ಬರಿಗೂ ತಾವು ಅಡಿಯಿಂದ ಮುಡಿತನಕ ನಿಲುವು ಅಭರಣ ಹೇರಿರುವಿರಿ !ನನ್ನ ಮಗ ರಾಯನಿಗೆ ಅವನು ಹೊರಲಾರದಷ್ಟು ಕೊಟ್ಟಿರುವಿರಿ ! ನನ್ನ ಮಗಳು ಚಿಕ್ಕ

ಅತ್ತಿಮಬ್ಬೆಗೆ ಅವಳು ಹುಟ್ಟುವಾಗಲೆ ಚೊಕ್ಕ ಬಂಗಾರದ ತುಲಾಭಾರಮಾಡಿಸಿ ಅದನ್ನೆಲ್ಲ ಅವಳಿಗೇ ಕೊಟ್ಟಿರುವಿರಿ ! ನನಗೆ ಯಾವ ಆಭರಣವೂ ಬೇಕಿಲ್ಲ. ಹುಟ್ಟವಾಗಲೆ ನಾನು ರನ್ನ ! ಅಪ್ಪಿ ತಪ್ಪಿ ಬಡತನ ಬಂದರೆ ಗಿಂದರೆ ಆಗ ನಿಮ್ಮ ಮೂರ್ತಿಯ ಮುಂದೆ ಕುಳಿತು ಅತ್ತುಬಿಡುವೆನು ! ಸೂರ್ಯನಿಗಿದಿರಾಗಿ ಭೂತಗನ್ನಡಿ ಹಿಡಿದರೆ ಸೂರ್ಯನ ಶಕ್ತಿ ಅದರಲ್ಲಿ ಕೇಂದ್ರೀಕೃತವಾಗದೆ ?" ಎಂದು ರನ್ನ ಭಾವಾವೇಶದಿಂದ ನುಡಿದನು.

ಎಲ್ಲರೂ ಕಲೆತು ಭಕ್ತಿಯಿಂದ ಅತ್ತಿಮಬ್ಬೆಯ ಸುವರ್ಣಪುತ್ತಳಿಯನ್ನು ಅರ ಮನೆಯ ಪಡಸಾಲೆಗೆ ಸಾಗಿಸಿದರು. ಇರಿವಬೆಡಂಗ ತಂದು ಸುರಿದಿದ್ದ ಸುವರ್ಣ ರಾಶಿಯ ಮೇಲೆ ಮೂರ್ತಿಯನ್ನು ಕೂರಿಸಿದರು. ಜಿನಬಿಂಬಕ್ಕೆ ಅಭಿಷೇಕ ಮಾಡುವಂತೆ ಇರಿವಬೆಡಂಗನೂ ಅಣ್ಣಿಗನೂ ರನ್ನನೂ ಕಲೆತು ಮೂರ್ತಿಗೆ ಜಲಾಭಿಷೇಕ ಮಾಡಿದರು. ಕ್ಷೀರಾಭಿಷೇಕವಾಯಿತು. ಗಂಧದ ಅಭಿಷೇಕವೂ ಮುಗಿಯಿತು. ಸುವರ್ಣವನ್ನು ಬಾಚಿ ಬಾಚಿ ಮೂರ್ತಿಯ ಮೇಲೆ ಸುರಿದರು ! ಅತ್ತಿಮಬ್ಬೆಯ ಸೊಸೆಯರೂ ಮೊಮ್ಮಕ್ಕಳೂ ಸೇರಿಕೊಂಡು ದಾನಚಿಂತಾಮಣಿಗೆ ಜೈ ! ಸಂಯಕ್ತ್ವ ಚೂಡಾಮಣಿಗೆ ಜೈ ! ಕನ್ನಡ ಕಣ್‌ಮಣಿಗೆ ಜೈ ! ಎಂದು ಜಯಕಾರ ಮಾಡಿದರು !

ಅತ್ತಿಮಬ್ಬೆ ಮಕ್ಕಾಳಾಟವನ್ನು ಕಣ್ ತುಂಬ ನೋಡಿ ಹಿಗ್ಗಿದಳು !ಪಚ್ಚೆಪಾರ್ಶ್ವನನ್ನು ತಂದು ಅತ್ತಿಮಬ್ಬೆ ತನ್ನ ಸುವರ್ಣಪುತ್ತಳಿಯ ತೊಡೆಯ ಮೇಲಿಟ್ಟ "ಮಹಾಪ್ರಭು, ಹುಡುಗರು ಏನೋ ತಿಳಿಯದೆ ಹುಡುಗಾಟ ಆಡಿವೆ. ಒಳ್ಳೆಯದೋ ಕೆಟ್ಟದ್ದೋ ನನಗೊಂದೂ ತಿಳಿಯದು. ಎಲ್ಲವನ್ನೂ ನಿನ್ನ ಮಡಿಲಲ್ಲಿ ಹಾಕಿಕೊಂಡು ಮಕ್ಕಳನ್ನು ಕ್ಷಮಿಸು ತಂದೆ" ಎಂದು ಭಕ್ತಿಯಿಂದ ಮೊರೆಯಿಟ್ಟಳು. ಅತ್ತಿಮಬ್ಬೆಯ ಸುವರ್ಣ ಪುತ್ತಳಿಯ ತೊಡೆಯ ಮೇಲೆ ಪಚ್ಚೆಪಾರ್ಶ್ವನಾಥನನ್ನು ಕೂರಿಸಿದಾಗ ದಾನಚಿಂತಾಮಣಿ ಸಮ್ಯಕ್ತ್ವದ ಕುಡಿಯಿಟ್ಟು ಮಿಡಿಯಾಗಿ ಹಣ್ಣಾದಂತಾಯಿತು !